# ಕಾಯಿರಿ



ಕಾಡಿನ ಹುಲಿ ಊರಿಗೆ ಬಂತು
ಪಟ್ಟಾ – ಪಟ್ಟೆ ಮಿರುಗಿಕೊಂಡು
ಸೂರ್ಯಕಾಂತಿ ಹರವಿಕೊಂಡು...
ಯಾರು ಕರೆದರು ನಾಡಿಗೆ?
ಕೊಳೆಯ ಬೀಡಿಗೆ?
ಈಗ, ಅಯ್ಯೋ ಎಂದರು
ಆಹಾ ಎಂದರು
'ಬಾಯಿ ತೆರೆ, ಹಲ್ಲು ತೋರಿಸು,
ಬೆಂಕಿಯೊಳಗೆ ಹಾರು,
ಬೋನೊಳಗೆ ಹೊಗು'
ಅರೆಹೊಟ್ಟೆ ಹಾಕಿದರು, ಆಟ್ಟಾಡಿಸಿದರು.
ಪಟ್ಟೆ ಮಾತ್ರಾ ಜರುಗಲಿಲ್ಲ;
ಕಣ್ಣ ಕೆಂಪು ಕರಗಲಿಲ್ಲ.
ಇದು ಹೆಜ್ಜೆ ಇಟ್ಟಲ್ಲಿ ಕಾಡುಗಳ್ಳರಿರಲಿಲ್ಲ;
ಬೇಟೆಗಾರರಿರಲಿಲ್ಲ
ಜೀವ ಸಂಕುಲ ಇದರ ಧ್ಯಾನಕ್ಕೆ ಸೋತು
ನೆಮ್ಮದಿಯಲ್ಲಿ ಹೆಜ್ಜೆ ಹಾಕಿತ್ತು
ದಣಿವಿಲ್ಲದ ಅರಿವ ದಾರಿ ನಡೆದ ಜಾಗವೆಲ್ಲ
ಮಂದಿ ತುಳಿದ ಸಪಾಟು ರಸ್ತೆಯಲ್ಲ.

ಊರ ಬಣ್ಣಕ್ಕೆ ಬಡಿವಾರಕ್ಕೆ
ಹುಲಿ ಆಕಳಿಸಿದೆ.
ಹಲ್ಲು ಕಿರಿಯಬೇಡಿ;
ಪಂಜಾದ ಗುರಿ ನಿಖರ
ಪಕ್ಕ ನಡೆಯಬೇಡಿ; ಅವಮಾನ ಅದಕ್ಕೆ
ಮುಂದೆ ನಡೆಯಬೇಡಿ;
ಅದಕ್ಕೆ ಹಸಿವಿದ್ದರೆ?
ಬೇಕಿದ್ದರೆ ಭಯ ಭಕ್ತಿಯಿಂದ
ಕಿಟಕಿಯಿಂದ ಇಣುಕಿ
ಕಾಡಿನ ಫೋಟೊ ನಿಮ್ಮ
ಹಿಂಬದಿ ಇರದಿರಲಿ!
ಹಾಗೊಂದು ವೇಳೆ
ನಿಮಗೆ ಸಾಮೀಪ್ಯ ಬೇಕಿದ್ದರೆ –
ಇಂಚಿಂಚೂ ಹಸಿರುಮರವಾಗಿ!
ದಣಿವಾದಾಗ, ನೆರಳು ಬೇಕೆನಿಸಿದಾಗ
ನಿಮಗೆ ಬೆನ್ನುಜ್ಜಿ ಮಲಗಿ
ಮೈಮುರಿಯುತ್ತೆ
ನಿಮ್ಮ ನಿಮ್ಮ ಬೇರ ಇಳಿಸಿಕೊಳ್ಳಿ
ಹಸಿರ ಹರಡಿಕೊಳ್ಳಿ
ಹುಲಿಗಾಗಿ ಕಾಯಿರಿ.

● ಸುಮಾ ಎಂಬಾರ್